# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1390 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20.03.2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ನೈತಿಕ್ ಪೋಲೀಸ್‌ಗಿರಿ ನೆಪದಲ್ಲಿ ಸಾರ್ವಜನಿಕರ ಮೇಲೆ ನಡೆಯುತ್ತಿರುವ ದಾಳಿಗಳಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಯುವಕರು ಜಿಲ್ಲೆಯಲ್ಲಿ ವೃತ್ತಿ ಜೀವನ ನಡೆಸಲು ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೈತಿಕ ಪೋಲೀಸ್‌ಗಿರಿ ನೆಪದಲ್ಲಿ ಸಾರ್ವಜನಿಕರ ಮೇಲೆ ನಡೆಯುತ್ತಿರುವ ದಾಳಿಗಳಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಯುವಕರು ಜಿಲ್ಲೆಯಲ್ಲಿ ವೃತ್ತಿ ಜೀವನ ನಡೆಸಲು ಆಸಕ್ತಿ ಕಳೆದುಕೊಳ್ಳುತ್ತಿರುವ ಬಗ್ಗೆ ಯಾವುದೇ ನಿದರ್ಶನಗಳು ಕಂಡು ಬಂದಿರುವುದಿಲ್ಲ ಹಾಗೂ ಈ ಬಗ್ಗೆ ಯಾವುದೇ ರೀತಿಯ ದೂರು ಬಂದಿರುವುದಿಲ್ಲ. ಅಂತಹ ನೈತಿಕ ಪೋಲೀಸ್‌ಗಿರಿ ದಾಳಿಗಳನ್ನು ಇಲಾಖೆಯಿಂದ ಸಮರ್ಪಕವಾಗಿ ನಿಯಂತ್ರಿಸುವ ಮೂಲಕ ಸಾರ್ವಜನಿಕರಲ್ಲಿ ನಿರ್ಭೀತಿಯ ವಾತವರಣವನ್ನು ಕಲ್ಪಿಸಿದೆ.</td></tr>
<tr><td>ಆ</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೈತಿಕ ಪೋಲೀಸ್‌ಗಿರಿ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿವೆ; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೈತಿಕ ಪೋಲೀಸ್‌ಗಿರಿ ವಿರುದ್ಧ ದಾಖಲಾದ ಪ್ರಕರಣಗಳ ಮಾಹಿತಿ ಕೆಳಗಿನಂತಿದೆ:-
<table>
<tr><th rowspan="2">ಕ್ರಸ</th><th rowspan="2">ಘಟಕ</th><th colspan="3">ವರ್ಷ</th></tr>
<tr><th>2023</th><th>2024</th><th>2025</th></tr>
<tr><td>1</td><td>ಮಂಗಳೂರು ನಗರ</td><td>7</td><td>4</td><td>1</td></tr>
<tr><td>2</td><td>ದಕ್ಷಿಣ ಕನ್ನಡ ಜಿಲ್ಲೆ</td><td>8</td><td>4</td><td>0</td></tr>
<tr><td></td><td>ಒಟ್ಟು</td><td>15</td><td>8</td><td>1</td></tr>
</table></td></tr>
<tr><td>ಇ</td><td>ನೈತಿಕ ಪೋಲೀಸ್‌ಗಿರಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಆರೋಪ ಪಟ್ಟಿಗಳನ್ನು ಸಲ್ಲಿಸಲಾಗಿದೆ;</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೈತಿಕ ಪೋಲೀಸ್‌ಗಿರಿ ಕುರಿತು ದಾಖಲಾದ ಪ್ರಕರಣಗಳಲ್ಲಿ ಸಲ್ಲಿಸಲಾದ ಆರೋಪ ಪಟ್ಟಿಗಳ ಮಾಹಿತಿ ಕೆಳಗಿನಂತಿದೆ:-
<table>
<tr><th rowspan="2">ಕ್ರಸ</th><th rowspan="2">ಘಟಕ</th><th colspan="3">ವರ್ಷ</th></tr>
<tr><th>2023</th><th>2024</th><th>2025</th></tr>
<tr><td>1</td><td>ಮಂಗಳೂರು ನಗರ</td><td>7</td><td>4</td><td>0</td></tr>
<tr><td>2</td><td>ದಕ್ಷಿಣ ಕನ್ನಡ ಜಿಲ್ಲೆ</td><td>8</td><td>3</td><td>0</td></tr>
<tr><td></td><td>ಒಟ್ಟು</td><td>15</td><td>7</td><td>0</td></tr>
</table></td></tr>
<tr><td>ಈ</td><td>ಸಾರ್ವಜನಿಕರು ಕಾನೂನನ್ನು ಕೈಗೆತ್ತಿಕೊಳ್ಳದಂತೆ ತಡೆಯಲು ಯಾವ ಕ್ರಮಕೈಗೊಳ್ಳಲಾಗಿದೆ? (ವಿವರ ನೀಡುವುದು)</td><td>ಸಾರ್ವಜನಿಕರು ಕಾನೂನನ್ನು ಕೈಗೆತ್ತಿಕೊಳ್ಳದಂತೆ ಈ ಕೆಳಗಿನಂತೆ ಕ್ರಮಕೈಗೊಳ್ಳಲಾಗಿದೆ:-<br>• ಯಾವುದೇ ಅನೈತಿಕ ಚಟುವಟಿಕೆ ನಡೆದು, ಅಲ್ಲಿ ನೈತಿಕ ಪೋಲೀಸ್‌ಗಿರಿ ನಡೆಯುವ ಸಂಭವನೀಯತೆ ಬಗ್ಗೆ ಸಾರ್ವಜನಿಕರಿಗೆ ಮುಂಚಿತವಾಗಿ ಮಾಹಿತಿ ಇದ್ದಲ್ಲಿ, ಸಾರ್ವಜನಿಕರು ಕೂಡಲೇ ಪೋಲೀಸರಿಗೆ ಮಾಹಿತಿಯನ್ನು ನೀಡಿ, ಕಾನೂನು ಕ್ರಮ ಕೈಗೊಳ್ಳಲು ಸಹಕರಿಸುವಂತೆ ಸಾರ್ವಜನಿಕ ಸಂಪರ್ಕ ಸಭೆ ಮತ್ತು ಶಾಂತಿ ಸಭೆಗಳಲ್ಲಿ ಸಾರ್ವಜನಿಕರಿಗೆ ಸೂಚನೆಗಳನ್ನು ನೀಡಲಾಗುತ್ತಿದೆ.</td></tr>
</table>

| | | |
|---|---|---|
| | | • ನೈತಿಕ ಪೋಲೀಸ್‌ಗಿರಿ ಮಾಡುವವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವುದಲ್ಲದೇ ಭದ್ರತಾ ಕಾಯ್ದೆಯಡಿ ಪ್ರಕರಣಗಳನ್ನು ದಾಖಲಿಸುವುದರ ಮೂಲಕ ಇಂತಹ ನೈತಿಕ ಪೋಲೀಸ್‌ಗಿರಿ ಕೃತ್ಯಗಳಿಗೆ ಸಹಕರಿಸುವ ವ್ಯಕ್ತಿಗಳಿಗೆ ಮುನ್ನೆಚ್ಚರಿಕೆ ನೀಡಲಾಗುತ್ತಿದೆ.<br>• ನೈತಿಕ ಪೋಲೀಸ್‌ಗಿರಿ ಘಟನೆಗಳು ಸಂಭವಿಸಿದ ಕೂಡಲೇ ಪೋಲೀಸರು ತುರ್ತು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಯತ್ನಿಸಿ ನೊಂದವರಿಗೆ ಹಾಗೂ ಅಲ್ಲಿನ ಆಸ್ತಿ-ಪಾಸ್ತಿಗೆ ನಷ್ಟವಾಗದಂತೆ ಸೂಕ್ತ ರಕ್ಷಣೆಯನ್ನು ನೀಡಿ ನೈತಿಕ ಪೋಲೀಸ್ ಗಿರಿಯಲ್ಲಿ ತೊಡಗಿರುವವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. |
| | | • ನೈತಿಕ ಪೋಲೀಸ್‌ಗಿರಿ ತಡೆಗಟ್ಟಲು ಜಿಲ್ಲಾ ಪೋಲೀಸ್ ವ್ಯಾಪ್ತಿಯಲ್ಲಿ ಈ-ಬೀಟ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲಾಗಿದೆ ಹಾಗೂ ಎಲ್ಲಾ ಅಧೀನ ಅಧಿಕಾರಿಗಳಿಗೆ, ಬೀಟ್ ಸಿಬ್ಬಂದಿ, ಗುಪ್ತವಾರ್ತೆ ಸಿಬ್ಬಂದಿಗಳಿಗೆ ನೈತಿಕ ಪೋಲೀಸ್‌ಗಿರಿ ನಡೆಸುವವರ ಮೇಲೆ ನಿಗಾ ವಹಿಸುವಂತೆ ಸೂಚಿಸಲಾಗಿದೆ.<br>• ಸಾರ್ವಜನಿಕ ಸಭೆ ಸಮಾರಂಭ ಮತ್ತು ಶಾಲಾ ಕಾಲೇಜುಗಳಿಗೆ ಪೋಲೀಸ್ ಇಲಾಖೆಯಿಂದ ಭೇಟಿ ನೀಡಿದ ಸಮಯದಲ್ಲಿ ನೈತಿಕ ಪೋಲೀಸ್‌ಗಿರಿ ಅಪರಾಧ ಮತ್ತು ಅದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿಯನ್ನು ನೀಡಿ, ಅರಿವು ಮೂಡಿಸಿ, ನೈತಿಕ ಪೋಲೀಸ್‌ಗಿರಿ ಘಟನೆ ಮತ್ತು ಸನ್ನಿವೇಶಗಳು ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗದಂತೆ ಪೋಲೀಸರಿಗೆ ಮಾಹಿತಿಯನ್ನು ಹಂಚಿಕೆ ಮಾಡುವ ಮೂಲಕ ಸಾರ್ವಜನಿಕರು ಕಾನೂನನ್ನು ಕೈಗೆತ್ತಿಕೊಳ್ಳದಂತೆ ಮನವರಿಕೆ ಮಾಡಲಾಗುತ್ತಿದೆ.<br>• ಯಾವುದೇ ರೀತಿಯ ನೈತಿಕ ಪೋಲೀಸ್‌ಗಿರಿ ಘಟನೆಗಳನ್ನು ಇಲಾಖೆಯು ಗಂಭೀರವಾಗಿ ಪರಿಗಣಿಸಿ ನೈತಿಕ ಪೋಲೀಸ್‌ಗಿರಿಯಲ್ಲಿ ತೊಡಗುವ ಮತ್ತು ತೊಡಗಿರುವ ವ್ಯಕ್ತಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಲಾಗುವುದು. |

ಹೆಚ್‌ಡಿ 115 ಪಿಸಿಇ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು